# ಶ್ರೀ ಗೋಕರ್ಣನಾಥ ಕೋ–ಓಪರೇಟಿವ್ ಬ್ಯಾಂಕ್ ಲಿ.

ಆಡಳಿತ ಕಛೇರಿ: "ಶ್ರೀ ಗುರುಕೃಪಾ", ಶ್ರೀ ಗೋಕರ್ಣನಾಥ ದೇವಸ್ಥಾನ ರಸ್ತೆ, ಕುದ್ರೋಳಿ, ಮಂಗಳೂರು–575003
ದೂರವಾಣಿ: 0824–2494662, 2494691
E-mail: admin@gokarnanathbank.com Website: www.gokarnanathbank.com

ಪ್ರಕಟಣೆ ಸಂಖ್ಯೆ : ಎಪಿಎಂಡಿ/ಪ್ರಕಟಣೆ/2026–27 ದಿನಾಂಕ: 06–07–2026

## ನೇಮಕಾತಿಗಾಗಿ ಅರ್ಜಿ ಆಹ್ವಾನ ಪ್ರಕಟಣೆ

ಶ್ರೀ ಗೋಕರ್ಣನಾಥ ಕೋ–ಓಪರೇಟಿವ್ ಬ್ಯಾಂಕ್ ಲಿ. ಕುದ್ರೋಳಿ, ಮಂಗಳೂರು–575003 ಅರ್ಹ ಅಭ್ಯರ್ಥಿಗಳಿಂದ ಅಟೆಂಡರ್ ಹುದ್ದೆಗಳ ನೇರ ನೇಮಕಾತಿಗಾಗಿ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

| ಕ್ರ. ಸಂ. | ಹುದ್ದೆಯ ಹೆಸರು | ಒಟ್ಟು ಹುದ್ದೆ | ವಿದ್ಯಾರ್ಹತೆ | ಮೀಸಲಾತಿ | ವೇತನ ಶ್ರೇಣಿ |
|---|---|---|---|---|---|
| 1 | ಅಟೆಂಡರ್ | 5 | ಎಸ್.ಎಸ್.ಎಲ್.ಸಿ. ಯಲ್ಲಿ ಉತ್ತೀರ್ಣರಾಗಿದ್ದು, ಕನ್ನಡವನ್ನು ಒಂದು ಭಾಷೆಯಾಗಿ ಓದಿರಬೇಕು. | ಎಲ್ಲಾ ವರ್ಗಗಳಿಗೂ ಅವಕಾಶ ನೀಡಲಾಗಿದೆ. | 21400–42000 |

ಸಹಕಾರ ಬ್ಯಾಂಕಿನಲ್ಲಿ ಕೆಲಸ ನಿರ್ವಹಿಸಿ ಅನುಭವ ಇರುವವರಿಗೆ ಆದ್ಯತೆ ನೀಡಲಾಗುವುದು.

## ನಿಬಂಧನೆಗಳು

1. ವಯೋಮಿತಿ: ಸಾಮಾನ್ಯ ಅಭ್ಯರ್ಥಿಗಳಿಗೆ ಗರಿಷ್ಠ 35 ವರ್ಷ, ಹಿಂದುಳಿದ ವರ್ಗ 2ಎ/2ಬಿ/3ಎ/3ಬಿ ಅಭ್ಯರ್ಥಿಗಳಿಗೆ 38 ವರ್ಷ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ಪ್ರವರ್ಗ – 1 ರ ಅಭ್ಯರ್ಥಿಗಳಿಗೆ 40 ವರ್ಷ.
2. ಅರ್ಜಿಯನ್ನು ಬ್ಯಾಂಕಿನ ವೆಬ್ ಸೈಟ್‌ನಿಂದ ಡೌನ್ ಲೋಡ್ ಮಾಡಿಕೊಂಡು ದಿನಾಂಕ 17–07–2026 ರೊಳಗಾಗಿ ಬ್ಯಾಂಕಿನ ಆಡಳಿತ ಕಛೇರಿಗೆ ತಲುಪುವಂತೆ ಸಲ್ಲಿಸತಕ್ಕದ್ದು.
3. ಅರ್ಜಿ ಫಾರಂಗಳನ್ನು ಅಭ್ಯರ್ಥಿಯ ಸ್ವಹಸ್ತಾಕ್ಷರದಲ್ಲಿಯೇ ಭರ್ತಿ ಮಾಡತಕ್ಕದ್ದು.
4. ವಿದ್ಯಾರ್ಹತೆ, ವಯಸ್ಸು, ಜಾತಿ ಬಗ್ಗೆ ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರವನ್ನು ಲಗತ್ತಿಸಿ ಅರ್ಜಿ ಸಲ್ಲಿಸುವುದು ಹಾಗೂ ಎಲ್ಲಾ ಪ್ರತಿಗಳಿಗೆ ಕಡ್ಡಾಯವಾಗಿ ಸ್ವಯ: ದೃಢೀಕರಣ ಮಾಡಿ ಅರ್ಜಿ ಸಲ್ಲಿಸುವುದು. ದಾಖಲಾತಿಗಳು ಸ್ವಯ: ದೃಢೀಕರಣಗೊಳ್ಳದಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
5. ನಿಗದಿತ ಅರ್ಜಿ ಶುಲ್ಕ: ಸಾಮಾನ್ಯ/ ಹಿಂದುಳಿದ ವರ್ಗದ ಅಭ್ಯರ್ಥಿಗಳಿಗೆ ರೂ. 300/–, ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಗೆ ರೂ. 150/– ಮೌಲ್ಯದ ಡಿ.ಡಿ/ಪೇ ಆರ್ಡರ್ ಮುಖಾಂತರ ಶ್ರೀ ಗೋಕರ್ಣನಾಥ ಕೋ–ಓಪರೇಟಿವ್ ಬ್ಯಾಂಕ್ ಲಿ. ಕುದ್ರೋಳಿ ಇದರ ಹೆಸರಿನಲ್ಲಿ ಮಂಗಳೂರಿನಲ್ಲಿ ಸಂದಾಯವಾಗುವಂತೆ ಪಡೆದು ಅರ್ಜಿಯ ಜೊತೆ ಲಗತ್ತಿಸಿ ಮುಚ್ಚಿರುವ ಲಕೋಟೆಯಲ್ಲಿ ಆಡಳಿತ ಕಛೇರಿಗೆ ಸಲ್ಲಿಸತಕ್ಕದ್ದು.
6. ಹುದ್ದೆಗೆ ಅನುಗುಣವಾಗಿ ನಿಗದಿಪಡಿಸಲಾದ ವಿದ್ಯಾರ್ಹತೆಯನ್ನು ಹೊಂದಿರಬೇಕು.
7. ಅಭ್ಯರ್ಥಿಗಳ ಅರ್ಹತೆ ಬಗ್ಗೆ ನೇಮಕಾತಿ ಸಮಿತಿಯು ಶಿಫಾರಸ್ಸು ಅಂತಿಮವಾಗಿರುತ್ತದೆ. ಅಂತಿಮ ಆಯ್ಕೆಯು ನಿರ್ದೇಶಕ ಮಂಡಲಿಯು ಅನುಮೋದನೆಗೆ ಒಳಪಟ್ಟಿರುತ್ತದೆ.
8. ಸಂಪೂರ್ಣ ಮಾಹಿತಿ ಒಳಗೊಂಡಿರದ ಹಾಗೂ ಅಗತ್ಯ ಪ್ರಮಾಣ ಪತ್ರಗಳು/ಭಾವಚಿತ್ರಗಳು/ಅರ್ಜಿ ಶುಲ್ಕವಿಲ್ಲದ ಅರ್ಜಿಗಳನ್ನು ಯಾವುದೇ ಸೂಚನೆ ಇಲ್ಲದೆ ತಿರಸ್ಕರಿಸಲಾಗುವುದು.
9. ನಿಗದಿಪಡಿಸಿದ ದಿನಾಂಕದ ನಂತರ ತಡವಾಗಿ ಬಂದ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ ಹಾಗೂ ಅರ್ಜಿ ಶುಲ್ಕವನ್ನು ವಾಪಸ್ಸು ಮಾಡಲಾಗುವುದಿಲ್ಲ.
10. ಈ ನೇಮಕಾತಿ ಪ್ರಕಟಣೆಯನ್ನು ಯಾವುದೇ ಹಂತದಲ್ಲಿ, ಯಾವುದೇ ಕಾರಣ ನೀಡದೆ ಹಿಂದಕ್ಕೆ ಪಡೆಯುವ/ ರದ್ದುಪಡಿಸುವ ಅಧಿಕಾರವನ್ನು ಶ್ರೀ ಗೋಕರ್ಣನಾಥ ಕೋ–ಓಪರೇಟಿವ್ ಬ್ಯಾಂಕ್ ಲಿ. ಇದರ ನೇಮಕಾತಿ ಸಮಿತಿಯು ಹೊಂದಿರುತ್ತದೆ. ಇಂತಹ ಸಂದರ್ಭಗಳಲ್ಲಿ ಅರ್ಜಿ ಶುಲ್ಕವನ್ನು ಹಿಂತಿರುಗಿಸಲಾಗುವುದಿಲ್ಲ ಅಥವಾ ಇನ್ನಾವುದೇ ನೇಮಕಾತಿಗೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದಿಲ್ಲ.

ಸಹಿ/–
ಶ್ರೀ ಗೋಕರ್ಣನಾಥ ಕೋ–ಓಪರೇಟಿವ್ ಬ್ಯಾಂಕ್ ಲಿ. ಪರವಾಗಿ
ಮುಖ್ಯ ಕಾರ್ಯ ನಿರ್ವಹಣಾಧಿಕಾರಿ (ಪ್ರಭಾರ)